(15)

# ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ಕೇಂದ್ರ ಕಛೇರಿ: ಬೆಂಗಳೂರು-27.

**ದಿನಾಂಕ 21.10.2016 ರಂದು ನಡೆದ ಬೆಂ.ಮ.ಸಾ.ಸಂಸ್ಥೆಯ ಮಂಡಳಿ ನಿರ್ದೇಶಕರ 87ನೇ ಸಭೆಯ ನಡಾವಳಿಗಳು.**

**ವಿಷಯ ಸಂಖ್ಯೆ: 20**

ಬೆಂ.ಮ.ಸಾ.ಸಂಸ್ಥೆಯಲ್ಲಿ ಕೇಂದ್ರ ಸರ್ಕಾರದ Faster Adoption and Manufacturing of Hybrid and Electric Vehicles (FAME) ಯೋಜನೆಯಡಿ ಅನುದಾನವನ್ನು ಪಡೆದು ವಿದ್ಯುತ್‌ಚಾಲಿತ ಬಸ್ಸುಗಳನ್ನು ಆಚರಣೆಗೊಳಿಸುವ ಬಗ್ಗೆ.

**Operation of Electric buses in BMTC by availing grants from Central Govt. under Faster Adoption and Manufacturing of Hybrid and Electric Vehicles (FAME).**

20.1) ವ್ಯವಸ್ಥಾಪಕ ನಿರ್ದೇಶಕರು, ಬೆಂ.ಮ.ಸಾ.ಸಂಸ್ಥೆಯಲ್ಲಿ ಕೇಂದ್ರ ಸರ್ಕಾರದ Faster Adoption and Manufacturing of Hybrid and Electric Vehicles (FAME) ಯೋಜನೆಯಡಿ ಅನುದಾನವನ್ನು ಪಡೆದು ವಿದ್ಯುತ್‌ಚಾಲಿತ ಬಸ್ಸುಗಳನ್ನು ಆಚರಣೆಗೊಳಿಸುವ ಬಗ್ಗೆ ಮಂಡಳಿ ಟಿಪ್ಪಣಿಯಲ್ಲಿನ ಪ್ರಮುಖ ಅಂಶಗಳನ್ನು ವಿವರಿಸಿದರು.

20.2) ವಿಷಯದ ವಿವರಗಳನ್ನು ಮುಂದುವರೆಸುತ್ತಾ, ವಿದ್ಯುತ್ ಚಾಲಿತ ಬಸ್ಸುಗಳ ಆರಂಭಿಕ ವೆಚ್ಚವು ಹೆಚ್ಚಿನದಾಗಿರುವುದರಿಂದ ಭಾರತ ಸರ್ಕಾರದ ಭಾರಿ ಕೈಗಾರಿಕಾ ಇಲಾಖೆಯ Faster Adoption and Manufacturing of Hybrid and Electric Vehicles (FAME) ಆರ್ಥಿಕ ನಿಧಿಯನ್ನು ಪಡೆದುಕೊಳ್ಳುವ ಬಗ್ಗೆ ವಿವರಗಳನ್ನು ನೀಡಿದರು.

20.3) ಮುಂದುವರೆದು, ಕಳೆದ ಎರಡು ವರ್ಷದಲ್ಲಿ ಕರ್ನಾಟಕ ಘನ ಉಚ್ಚ ನ್ಯಾಯಾಲಯವು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಮೇರೆಗೆ ವಾಯು ಮಾಲಿನ್ಯ ಕಡಿಮೆ ಮಾಡುವ ಸ್ವಚ್ಛ ಇಂಧನದ ವಾಹನಗಳನ್ನು ಕಾರ್ಯಾಚರಣೆ ಮಾಡುವಂತೆ ಸೂಚಿಸಿರುವುದಾಗಿ ತಿಳಿಸಿದರು.

ನಂತರ ಈ ಕೆಳಕಂಡಂತೆ ಠರಾವು ಮಾಡಲಾಯಿತು.

**ಠರಾವು ಸಂಖ್ಯೆ: 1649/ 87ನೇ ಸಭೆ ದಿನಾಂಕ 21.10.2016**

ಅ. **150 ವಿದ್ಯುತ್ ಚಾಲಿತ ವಾಹನಗಳ ಸೇರ್ಪಡೆಗೆ ಮಂಡಳಿ ಟಿಪ್ಪಣಿಯಲ್ಲಿ ವಿವರಿಸಿರುವಂತೆ ಅನುಮೋದನೆ ನೀಡಲಾಯಿತು.**

ಆ. ಭಾರತ ಸರ್ಕಾರದ ಭಾರಿ ಕೈಗಾರಿಕಾ ಇಲಾಖೆಯ FAME ಯೋಜನೆಯ NEMMP-2020 ಅಡಿಯಲ್ಲಿ 150 ವಿದ್ಯುತ್ ಚಾಲಿತ ವಾಹನಗಳ ಖರೀದಿಗೆ ಕರ್ನಾಟಕ ಸರ್ಕಾರದ ಮೂಲಕ ಆರ್ಥಿಕ ಸಹಾಯವನ್ನು ಪಡೆದು ಮತ್ತು ಆಚರಣೆಗೆ ಅವಶ್ಯ ಮೂಲ ಸೌಕರ್ಯಗಳನ್ನು ನಿರ್ಮಿಸಿಕೊಳ್ಳಲು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರ ನೀಡಲಾಯಿತು.

**Resolution No: 1649 / 87th Board Meeting dated 21.10.2016**

a) **Approval is accorded for induction of 150 electric buses as enumerated in the Board Note.**

b) **Managing Director is authorized to seek the financial assistance from DHI, GoI through GoK, for the procurement of 150 electric buses and setting up of the required infrastructure for the operation of these electric buses under FAME scheme of NEMMP-2020.**

"ದೃಢೀಕರಿಸಿದೆ"

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ